## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ.

**ಸಿ ಸಿ ನಂಃ 1058/2021**

ಫಿರ್ಯಾದಿಃ ಹೊನ್ನಾವರ ಪೋಲಿಸ್ ಠಾಣೆಯ ಪರವಾಗಿ,
ಸಹಾಯಕ ಪೋಲೀಸ್ ಉಪ ನಿರೀಕ್ಷಕರು,
ಹೊನ್ನಾವರ ಪೋಲೀಸ್ ಠಾಣೆ, ಹೊನ್ನಾವರ.

**– ವಿರುದ್ಧ –**

ಆರೋಪಿ: ಹಸನ್ ತಂದೆ ಹನೀಫ್ ಷಾ ಅಣ್ಣಿಗೇರಿ,
ವಯಸ್ಸು 36 ವರ್ಷ,
ಉದ್ಯೋಗಃ ಕೂಲಿ ಕೆಲಸ,
ಸಾಕೀನಃ ಹೊನ್ನಾವರ, ಬಂದರ ರಸ್ತೆ, ಮಟನ್ ಶಾಪ್ ಹತ್ತಿರ,
ಹೊನ್ನಾವರ.

## ದೋಷಾರೋಪಣೆ

ಶ್ರೀ ಚಂದ್ರಶೇಖರ ಈ ಬಣಕಾರ., ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನಿನ್ನ ಮೇಲೆ ಈ ಕೆಳಕಂಡ ದೋಷರೋಪಣೆಗಳನ್ನ ಹೊರಿಸುತ್ತಿದ್ದೇನೆ.

ನಿಮ್ಮ ಮೇಲೆ ಹೊರಿಸುವ ಅಪಾದನೆ ಏನೆಂದರೆಃ–

ದಿನಾಂಕಃ 10–02–2021 ರಂದು ರಾತ್ರಿ 08–30 ಗಂಟೆಯ ಸಮಯದಲ್ಲಿ ಹೊನ್ನಾವರ ಪೋಲಿಸ್ ಠಾಣಾ ವ್ಯಾಪ್ತಿಯ ಹೊನ್ನಾವರ ತಾಲೂಕ ಬಂದರ ರಸ್ತೆ, ಹೊನ್ನಾವರದಲ್ಲಿ ವಾಸವಿರುವ ಆರೋಪಿತನಾದ ನೀನು ಚಾಸಾ–1/ಶ್ರೀಮತಿ ಶೆಹನಾಜ್ ಇಕ್ಬಾಲ್ ಚೌಗುಲೆರವರ ಜಾಗದಲ್ಲಿ ಅಕ್ರಮ ಪ್ರವೇಶ ಮಾಡಿ, ಅ ಮೂಲಕ ನೀನು **ಭಾರತೀಯ ದಂಡ ಸಂಹಿತೆ ಕಲಂ 447** ನೇದರಡಿ ಶಿಕ್ಷಾರ್ಹ ದೋಷರೋಪ ಮಾಡಿರುತ್ತೀರಿ ಎಂದು ಆರೋಪಿಸಲಾಗಿದೆ.

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತನಾದ ನೀನು ಚಾಸಾ–1 ನೇಯವರ ಅಡುಗೆ ಮನೆ ಕಿಟಕಿ ಬಳಿ ಬಂದಾಗ, ಚಾಸಾ–1 ರವರು ನಿನ್ನನ್ನು ಉದ್ದೇಶಿಸಿ ಇಲ್ಲಿ ಯಾಕೆ ಬಂದಿದ್ದೀಯಾ ಅಂತಾ ಕೇಳಿದ್ದಕ್ಕೆ ನೀನು ಚಾಸಾ–1 ನೇಯವರನ್ನು ಉದ್ದೇಶಿಸಿ ನನ್ನ ಮೇಲೆ ದೂರು ನೀಡುತ್ತೀಯಾ ಅಂತಾ ಹೇಳಿ ಅವರನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿ, ಆ ಮೂಲಕ ನೀವು **ಭಾರತೀಯ ದಂಡ ಸಂಹಿತೆ ಕಲಂ 504** ನೇದರಡಿಯಲ್ಲಿ ಶಿಕ್ಷರ್ಹಾ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತನಾದ ನೀನು ಚಾಸಾ–1 ರ ಅಡುಗೆ ಮನೆ ಕಿಟಕಿಯಿಂದ ಒಳಗೆ ಕೈ ಹಾಕಿ ಚಾಸಾ–1 ರವರ ಕೈ ಹಿಡಿದೆಳೆದು ಮಾನಕ್ಕೆ ಕುಂದುಂಟು ಪಡಿಸಿ, ಆ ಮೂಲಕ

ನೀವು **ಭಾರತೀಯ ದಂಡ ಸಂಹಿತೆ ಕಲಂ 354** ನೇದರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತನಾದ ನೀನು ಚಾಸಾ-1 ರವರನ್ನು ಉದ್ದೇಶಿಸಿ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವ ಬೆದರಿಕೆ ಹಾಕಿ, ಆ ಮೂಲಕ ನೀವು **ಭಾರತೀಯ ದಂಡ ಸಂಹಿತೆ ಕಲಂ 506** ನೇದರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ನೀವು ಮೇಲಿನ ಆರೋಪದಡಿಯಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ

ಪ್ರಶ್ನೆ 1. ನಿಮ್ಮ ಮೇಲೆ ಹೊರಿಸಲಾದ ಆರೋಪಣೆಯನ್ನು ಕೇಳಿದಿರಾ? ಅದು ನಿಮಗೆ ತಿಳಿಯಿತೆ?
ಉತ್ತರಃ

ಪ್ರಶ್ನೆಃ 2. ನೀವು ಸದ್ರಿ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆಯಾಗಬೇಕೆ?
ಉತ್ತರಃ

ಸಹಿ ಇದೆ

**ದಿನಾಂಕಃ** 13-07-2022

(**ಚಂದ್ರಶೇಖರ ಈ ಬಣಕಾರ**).,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ.,ಹೊನ್ನಾವರ.

**ಆರೋಪಿಃ**